ಶ್ರೀ ಎಂ.ಎಂ. ಜೆ. ಸದ್ಯೋಜಾತ.—ಪುನಃ ಫೈಲ್ ತರಿಸಿ ನೋಡಿ ಆದಷ್ಟು ಬೇಗ ಮಾಡಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಶೀನ್ಯಾಳಿ ಚಂದ್ರಶೇಖರ್.—ಆದಷ್ಟು ಬೇಗ ಎಂದರೆ ಎಷ್ಟು ದಿವಸಗಳಲ್ಲಿ?

ಶ್ರೀ ಎಂ.ಎಂ. ಜೆ. ಸದ್ಯೋಜಾತ.—ಅದನ್ನು ನಿರ್ದಿಷ್ಟವಾಗಿ ಹೇಳಲಿಕ್ಕೆ ಬರುವುದಿಲ್ಲ.

Thermal Plant at Mangalore

654 SRI B.A. Mohideen (Bantwal).—Will the Chief Minister be pleased to state.—

Whether there is a proposal before the Government to set up a thermal plant at Mangalore ?

SRI S. BANGARAPPA (Minister of Revenue and Agriculture).— on behalf of SRI R. GUNDU RAO (Chief Minister).— There is no proposal at present to set up a thermal plant at Mangalore.

ಶ್ರೀ ಬಿ.ಎ. ಮೊಹಿದ್ದೀನ್.—(ಭಂಟವಾಳ) ಮಂಗಳೂರಿನಲ್ಲಿ Termal plant ಸ್ಥಾಪಿಸುವುದು ಅವಶ್ಯಕ ಎಂಬ ಅಭಿಪ್ರಾಯ ಸರ್ಕಾರಕ್ಕಿಲ್ಲವೇ?

ಶ್ರೀ ಎಸ್. ಬಂಗಾರಪ್ಪ.—ಮಂಗಳೂರಿನಲ್ಲಿ ಥರ್ಮಲ್ ಪ್ಲಾಂಟ್ ಸ್ಥಾಪಿಸುವುದು ಅವಶ್ಯಕವೆ ಅಥವಾ ಇಲ್ಲವೇ ಎನ್ನುವ ಅಭಿಪ್ರಾಯವನ್ನು ಕೊಡಲಿಕ್ಕೆ ನಾನುಈಗ ಸಿದ್ದನಿಲ್ಲ. ಆದರೆ ಥರ್ಮಲ್ ಪ್ಲಾಂಟ್ ಬಗ್ಗೆ ೨ನೇ ಸ್ಟೇಜ್ ಆಗಬೇಕು. ನಮ್ಮ ಇಲಾಖೆಯ ತಾಂತ್ರಿಕ ಅಧಿಕಾರಿಗಳ ಅಭಿಪ್ರಾಯದ ಪ್ರಕಾರ ೧೯೯೫ರ ಸುಮಾರಿಗೆ ಮತ್ತೊಂದು ಥರ್ಮಲ್ ಪ್ಲಾಂಟ್ ಹಾಕಬೇಕಾಗುತ್ತದೆ ಎನ್ನುವ ಅಭಿಪ್ರಾಯವಿದೆ. ಅದನ್ನು ಮಂಗಳೂರು, ರಾಯಚೂರು ಅಥವಾ ಮೈಸೂರು ಎಲ್ಲಿ ಮಾಡಬೇಕು ಎಂಬುದನ್ನು ಸ್ಪೆಸಿಫಿಕ್ ಆಗಿ ಈಗಲೇ ಹೇಳಲಿಕ್ಕೆ ಬರುವುದಿಲ್ಲ. ಅದಕ್ಕೆ ಬೇಕಾಗುವ ಕೋಲ್ ಟ್ರಾನ್ಸ್ಪೋರ್ಟ್ ಮುಂತಾದ ಸೌಲಭ್ಯಗಳು ಎಲ್ಲಿ ಸಿಗುತ್ತವೆಂಬುದನ್ನು ನೋಡಿ ಎರಡನೇ ಫವರ್ ಪ್ಲಾಂಟ್ ಯೋಜನೆಯನ್ನು ಮಾಡಬಹುದು ಎಂದು ನಮ್ಮ ತಾಂತ್ರಿಕ ತಜ್ಞರುಅಭಿಪ್ರಾಯ ಇಟ್ಟುಕೊಂಡಿದ್ದಾರೆ.

ಶ್ರೀ ಎ.ಜಿ. ಕೊಡಗಿ.—ಮಂಗಳೂರಿನಲ್ಲಿ ಯಾರಾದರೂ ಮಂತ್ರಿಗಳು ಬಂದರೆ ಇದರ ಬಗ್ಗೆ ತಾವು ಗಟ್ಟಿಲೆ ಭಾಷಣ ಕೊಡುತ್ತಾರೆ. ಥರ್ಮಲ್ ಪ್ಲಾಂಟ್ ಅವಶ್ಯಕತೆ ಇದೆ ಎಂದು ಮಂತ್ರಿಗಳು ಭಾಷಣ ಮಾಡುವಾಗ ಹೇಳುತ್ತಾರೆ ಜೊತೆಗೆ ಹಣಕಾಸಿನ ಮುಗ್ಗಟ್ಟು ಇರುವುದರಿಂದ ಮುಂದೆ ಮಾಡಬೇಕಾಗುತ್ತದೆ ಎಂದೂ ಹೇಳುತ್ತಾರೆ. ಆದರೆ ಇಲ್ಲಿ ಮಂತ್ರಿಗಳು ಉತ್ತರ ಕೊಟ್ಟಿರುವುದನ್ನು ನೋಡಿದರೆ ಅನುಮಾನ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟೀಕರಣ ಕೇಳಂತ್ತಿದ್ದೇನೆ. ಇದಕ್ಕೆ ಉತ್ತರ ಕೊಡ ತಕ್ಕಂಥಾದ್ದು ಅವಶ್ಯಕ?

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಉತ್ತರಕೊಡತಕ್ಕಂಥಾದ್ದು ಸುಲಭ ಮಂತ್ರಿಗಳು ಅವರ ಅಭಿಪ್ರಾಯವನ್ನು ಅಲ್ಲಿ ಹೇಳಿದ್ದಾರೆ, ನಾವು ಕೂಡ ಅದನ್ನು ಇಲ್ಲವೆಂದು ಹೇಳಲಿಲ್ಲ. ಕೆಲವು ಸಂಬಂಧಪಟ್ಟ ಜಿಲ್ಲೆಯ ಮಂತ್ರಿಗಳು ಒಬ್ಬರು ಹಾಗೆ ಅಭಿಪ್ರಾಯಪಡಬಹುದು. ಮತ್ತೊಂದು ಥರ್ಮಲ್ ಪ್ಲಾಂಟ್ ಮಾಡುವಾಗ ಎಲ್ಲಿ ಮಾಡಬೇಕೆಂದು ಯೋಚನೆ ಮಾಡೋಣ ನಾನು ಕೂಡ ಮಂಗಳೂರಿನಲ್ಲಿ ಥರ್ಮಲ್ ಪ್ಲಾಂಟ್ ಮಾಡಂವುದೇ ಇಲ್ಲವೆಂದು ಹೇಳುವುದಿಲ್ಲ. ಸರ್ಕಾರದ ಅಭಿಪ್ರಾಯದಲ್ಲಿ ಮಂಗಳೂರು ಇದ್ದೇ ಇರುತ್ತದೆ.

ಶ್ರೀ ಕೆ. ರಾಮಭಟ್. - ತಾಪಸ್ಥಾವರವನ್ನು ಸ್ಥಾಪಿಸುವ ಬಗ್ಗೆ ಮಂಗಳೂರು ಯೋಗ್ಯ ಸ್ಥಳ ಹೌದೇ ಅಲ್ಲವೇ? ಇದು ಯೋಗ್ಯ ಸ್ಥಳ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ?

† ಶ್ರೀ ಎಸ್. ಬಂಗಾರಪ್ಪ.—ಈ ರೀತಿ ನಮ್ಮ ಸ್ನೇಹಿತರಂ ದಕ್ಷಿಣ ಕನ್ನಡ ಜಿಲ್ಲೆಯನ್ನೇ ಸೇವಿಂತ ವಾಗಿಟ್ಟುಕೊಂಡು ಥರ್ಮಲ್ ಪವರ್ ಪ್ಲಾಂಟ್ ಅಲ್ಲಿ ಸ್ಥಾಪಿಸಬೇಕೆಂದು ಕೇಳುತ್ತಿದ್ದಾರೆ. ರಾಜ್ಯದಲ್ಲಿ ಯಾವ ಸ್ಥಳ ಥರ್ಮಲ್ ಪ್ಲಾಂಟ್ ಹಾಕುವುದಕ್ಕೆ ಯೋಗ್ಯ ಎನ್ನುವುದು ತಜ್ಞರ ತಾಂತ್ರಿಕ ವರದಿಯ ಮೇಲೆ ಅವಲಂಬಿಸುತ್ತದೆ. ಈಗ ಮಾನ್ಯ ಸದಸ್ಯರು ಕೇಳತಕ್ಕ ಪ್ರಶ್ನೆಯಲ್ಲಿ ಮಂಗಳೂರಿನ ವಿಷಯ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ರಾಜ್ಯದಲ್ಲಿ ಎಲ್ಲ ಥರ್ಮಲ್ ಪ್ಲಾಂಟ್ ಮಾಡಿದರೆ ರಾಜ್ಯದ ಪ್ರಗತಿಪರ ದೃಷ್ಟಿ ಯಿಂದ ಒಳ್ಳೆಯದಿರುತ್ತದೋ ಅಲ್ಲಿ ಮಾಡಬೇಕಾಗುತ್ತದೆ. ಈಗ ಮಂಗಳೂರಿನಲ್ಲಿ ಆಗಲಿ, ಮತ್ತೊಂದು ಕಡೆಯಾಗಲಿ ಎಂಬ ವಾದ-ವಿವಾದ ವಿಚಾರ ಇರತಕ್ಕುದ್ದು ರಾಯಚೂರಿನಲ್ಲಿ ಮಾಡುವ ಬಗ್ಗೆ ಅದು ಇನ್ನೂ ಕಂಪ್ಲೀಟ್ ಆಗಿಲ್ಲ ಅದು ಇನ್ನೂ ಫಸ್ಟ್ ಸ್ಟೇಜಿನಲ್ಲಿ ಇದೆ. ಸೆಕಂಡ್ ಸ್ಟೇಜಿನಲ್ಲಿ ೧೯೮೪ರ ಹೊತ್ತಿಗೆ ಎರಡನೇ ಪವರ್ ಪ್ಲಾಂಟ್ ಸ್ಥಾಪಿಸುವ ಬಗ್ಗೆ ವಿಚಾರಮಾಡೋಣ.

ಶ್ರೀ ಆನಂದಕುಂದ ಹೆಗ್ಡೆ.—ಮಂಗಳೂರಿನಲ್ಲಿ ತಾಪಸ್ಥಾವರವನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರದಿಂದ ಸೂಚನೆ ಬಂದಿರುವುದು ನಿಜವೇ?

ಶ್ರೀ ಎಸ್. ಬಂಗಾರಪ್ಪ.—ಈಗ ಸದ್ಯಕ್ಕೆ ಆ ಬಗ್ಗೆ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮಂಗಳೂರು ಬಗ್ಗೆ ಮಾತ್ರ ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಾರೆ ಎಂದು ಹೇಳಿದರು. ಮತ್ತು ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕು ಎಂದು ಹೇಳಿದರು. ಬಹುಶಃ ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ರಾಯಚೂರು ಜೊತೆಗೆ ಮಂಗಳೂರಿನ ಹೆಸರನ್ನೂ ಥರ್ಮಲ್ ಪ್ಲಾಂಟ್ ಸ್ಥಾಪನೆ ಮಾಡುವುದಕ್ಕೆ ಸೇರಿಸಲಾಗಿತ್ತು. ಮಂಗಳೂರು ಕರ್ನಾಟಕದಲ್ಲಿ ಇರುವುದರಿಂದ ರಾಜ್ಯದ ಹಿತದೃಷ್ಟಿಯಿಂದ ಇದರಲ್ಲಿ ಮಂಗಳೂರಿನ ಹೆಸರು ಬುದಿತ್ತು. ಮತ್ತೆ ಮಂಗಳೂರಿನ ಹೆಸರನ್ನು ಥರ್ಮಲ್ ಪ್ಲಾಂಟ್ ಹಾಕುವುದಕ್ಕೆ ಏತಕ್ಕೆ ಸೂಚನೆ ಮಾಡಿದರು ಎಂದರೆ ಮಂಗಳೂರಿನಲ್ಲಿ ಒಂದು ಬೃಹತ್ ಬಂದರು ಇದೆ, ಬೇರೆ ಕಡೆಯಿಂದ ಕೋಲ್ ತರುವುದಕ್ಕೆ ಅನುಕೂಲವಾಗುತ್ತದೆ. ಇನ್ನೂ ಮುಂತಾದ ಸಾಮಾನು ಗಳನ್ನು ಹೊರಗಡೆಯಿಂದ ನೀರಿನ ಮೂಲಕ ಸುಲಭವಾಗಿ ತರುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಮಂಗಳೂರಿಗೆ ಥರ್ಮಲ್ ಪ್ಲಾಂಟ್ ಬರಬೇಕು ಎನ್ನುವ ಪ್ರಪೋಸಲ್ ಇತ್ತು. ಇದು ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು. ಆದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ಥರ್ಮಲ್ ಪ್ಲಾಂಟನ್ನು ಮಂಗಳೂರಿನಲ್ಲಿ ಹಾಕುವುದು ಸಮಂಜಸ ಎಂದು ಮಾತ್ರ ಹೇಳುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.-ನಾನು ಸುಮ್ಮನೆ ಹೇಳಿದೆ ಥರ್ಮಲ್ ಪವರ್ ಪ್ಲಾಂಟ್ ಅನ್ನು ರಾಯಚೂರಿ ನಲ್ಲಿ ಮಾಡಿದರೆ ಅದು ಅಲ್ಲಿಗೆ ಹೋಗುತ್ತದೆ. ಮಂಗಳೂರಿನಲ್ಲಿ ಮಾಡಿದರೆ ಮತ್ತೊಂದು ಉಪಯೋಗಕ್ಕೆ ಬರುತ್ತದೆ. ಮಂಗಳೂರು ಕೂಡ ನುಧ್ಯದಲ್ಲಿ ಇದೆ. ಅಲ್ಲಿ ರೇವು ಆಶ್ರಯ ಇದೆ. ಅಲ್ಲಿ ಥರ್ಮಲ್ ಪ್ಲಾಂಟ್ ಮಾಡಿದರೆ ಕೋಲ್ ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ರೇವು ಇರುವುದರಿಂದ ಅನುಕೂಲವಾಗುತ್ತದೆ. ರಾಯಚೂರನ್ನು ಥರ್ಮಲ್ ಪ್ಲಾಂಟ್ ಸ್ಥಾಪನೆಗೆ ಆಯ್ಕೆ ಮಾಡುವ ಕಾಲದಲ್ಲಿ ಮಂಗಳೂರು ಸಹ ಇತ್ತು. ಮುಂದೆ ಎರಡನೇ ಥರ್ಮಲ್ ಪ್ಲಾಂಟ್ ಸ್ಥಾಪನೆ ಮಾಡುವಾಗ ಮಂಗಳೂರನ್ನು ವಿಚಾರ ಮಾಡೋಣ ಎಂದು ನಾನು ಈಗಾಗಲೇ ಒಂದು ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಹೇಳಿದ್ದೇನೆ

Sites in Villages of Sindagi Taluk

678 SRI M. H. BEKINALKAR (Sindgi).—Will the Minister for Housing and Urban Development be pleased to state.—

(a) the number of villages of Sindgi Taluk where sites have not been given, which are such villages;

(b) the reasons for not distributing house sites in these villages?